## ಭಯವಾದರೂ ಚೆಂದವಿದೆ

ಝೀ ಕನ್ನಡ ವಾಹಿನಿಯಲ್ಲಿ ರಾತ್ರಿ 10.30ಕ್ಕೆ ಪ್ರತಿ ಸೋಮವಾರದಿಂದ ಶುಕ್ರವಾರದವರೆಗೆ ಬರುವ 'ನಿಗೂಢ ರಾತ್ರಿ' ಧಾರಾವಾಹಿ ತುಂಬಾ ಚೆನ್ನಾಗಿದೆ. ಮಾ. ಅನಂದ್ ನಿರ್ದೇಶನದ ಈ ಧಾರಾವಾಹಿ ಪ್ರತಿ ದಿನ ಕುತೂಹಲಕಾರಿ ಸನ್ನಿವೇಶಗಳಿಂದ ಕೂಡಿರುತ್ತದೆ. ಮುಂದೆ ಏನು? ಮುಂದೆ ಏನು? ಎಂಬ ಕುತೂಹಲ ಮೂಡಿಸುತ್ತದೆ. ನಮ್ಮೂರ ಹತ್ತಿರದ ಪುಟ್ಟ ಹಳ್ಳಿಯಲ್ಲಿ ಅದ್ಭುತವಾಗಿ ಚಿತ್ರೀಕರಣ ಮಾಡಿದ್ದಾರೆ. ಎಲ್ಲ ಕಲಾವಿದರು ಉತ್ತಮವಾಗಿ ಅಭಿನಯಿಸಿದ್ದಾರೆ. ಈ ವಾರದಲ್ಲಿ ಮೂಡಿಬಂದ ಯಕ್ಷಗಾನದ ದೃಶ್ಯಾವಳಿಗಳಂತೂ ಬಣ್ಣಿಸಲು ಪದಗಳು ಸಾಲವು.

–ಪಿ.ಗೋವಿಂದರಾಜ್, ಶಿವಮೊಗ್ಗ

## ಸುದ್ದಿಗೆ ಈಟಿವಿ

ಈಟಿವಿ ಪರಿಪೂರ್ಣ ಸುದ್ದಿ ವಾಹಿನಿಯಾಗಿ ಹಿಂದಿನ ಎಲ್ಲಾ ಅಂಶಗಳನ್ನು ಮೈತುಂಬಿಕೊಂಡು ಬರುತ್ತಿದ್ದು ನೋಡಲು ಖುಷಿಯಾಗುತ್ತಿದೆ. ಕನ್ನಡನಾಡು, ರಾಷ್ಟ್ರೀಯ ವಾರ್ತೆಗಳು ಈಟಿವಿಯ ಪ್ರಧಾನ ಆಸ್ತಿಯಾಗಿದ್ದವು. ಬದಲಾವಣೆಗಳಾದಾಗ ಇವೆಲ್ಲಾ ಕಳೆದು ಹೋಗಿದ್ದವು. ಆದರೆ ಈಗ ಅವೆಲ್ಲಾ ಮತ್ತೆ ಪ್ರಸಾರವಾಗುತ್ತಿವೆ. ಈಟಿವಿಯ ಪ್ರಮುಖ ಆಕರ್ಷಣೆಯಾಗಿರುವ 'ಅನ್ನದಾತ' 7.30ರ ಬದಲು ಹಿಂದಿನಂತೆಯೇ 6.30ಕ್ಕೆ ಪ್ರಸಾರವಾಗಲಿ. ಇದು ಬರೀ ಸುದ್ದಿ ಸಮಾಚಾರಕ್ಕೆ ಸೀಮಿತವಾಗಿರಲಿ, ಇತರ ವಾಹಿನಿಗಳಂತೆ ಇದರಲ್ಲಿ ಜೋತಿಷ, ಭವಿಷ್ಯಗಳು ಬೇಕಾಗಿಲ್ಲ.

–ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

## ಮೆಚ್ಚುವ ಒಂದು ಪಾತ್ರ ತೋರಿಸಿ

'ಕಲರ್ಸ್ ಕನ್ನಡ'ದಲ್ಲಿ 7– 8.30ರ ತನಕ ನೋಡುಗರನ್ನು ಎಳೆದುಕೊಂಡು ಹೋಗುವ ಧಾರಾವಾಹಿಗಳು ನಾಲ್ಕು ತಿಂಗಳಿಗೊಮ್ಮೆ ಹೊಸ ತಿರುವನ್ನು ಪಡೆಯುತ್ತವೆ. ಆದರೂ 'ಪುಟ್ಟ ಗೌರಿ ಮದುವೆ', 'ಲಕ್ಷ್ಮೀ ಬಾರಮ್ಮ', 'ಅಗ್ನಿಸಾಕ್ಷಿ' ಧಾರಾವಾಹಿಗಳಲ್ಲಿ ಜನ ಮೆಚ್ಚುವ ಒಂದಾದರೂ ಪಾತ್ರ ಇದೆಯೇ? ಎಲ್ಲಾ ಪಾತ್ರಗಳೂ ಪೆದ್ದು ಪೆದ್ದು.

ಸೋ ಕಾಲ್ಡ್ ಎಜುಕೇಟೆಡ್ ಪಾತ್ರಗಳೆಲ್ಲವೂ ಹೆಡ್ಡರಾ? ಒಂದೇ ಕುಟುಂಬದಲ್ಲಿ ಹೀಗೆ ಆಗುವುದು ಇದೆಯಾ?

–ಪ್ರೊ. ಮಧೂರು ಮೋಹನ ಕಲ್ಲೂರಾಯ, ಬೆಳ್ತಂಗಡಿ

ವಾರದ ಪತ್ರ

## ಸ್ಪರ್ಧಿಗಳ ಬಗ್ಗೆಯೂ ಗಮನವಿರಲಿ

'ಚಂದನ' ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಥಟ್ ಅಂತ ಹೇಳಿ' ಕಾರ್ಯಕ್ರಮದಲ್ಲಿ ಇತ್ತೀಚೆಗೆ ಪ್ರೌಢಶಾಲಾ ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದಾರೆ. ಅವರಲ್ಲಿ ಕೆಲವರಿಗಂತೂ ಕನ್ನಡ ಓದಲು ಬರುವುದೇ ಇಲ್ಲ. ಒಬ್ಬ ವಿದ್ಯಾರ್ಥಿಯಂತೂ, 'ಮೂತ್ರಪಿಂಡ' ವನ್ನು 'ಮಾತೃಪಿಂಡ' ಅಂತ ಓದಿದ್ದನ್ನು ಕೇಳಿ ಬಹಳ ಬೇಸರವಾಯಿತು. ಇಂಗ್ಲಿಷ್ ಮಾಧ್ಯಮದವರೇ ಆದರೂ ಕನಿಷ್ಠ ಕನ್ನಡ ಓದಲೂ ಬರುವುದಿಲ್ಲವೇ? ಹೆಚ್ಚಿನ ಮಕ್ಕಳೆಲ್ಲಾ ಓದಲು ತಡವರಿಸುತ್ತಾರೆ. ಕ್ಯಾಲ್ಕುಲೇಟರ್‌ನ ಉಪಯೋಗದಿಂದಾಗಿ ಕೂಡಿ ಕಳೆಯುವ ಲೆಕ್ಕಗಳಂತೂ ಮರೆತೇ ಹೋಗಿರಬಹುದು.

ಆ ವಿದ್ಯಾರ್ಥಿಗಳ ಸಾಮಾನ್ಯ ಜ್ಞಾನ ಎಷ್ಟರ ಮಟ್ಟಗಿದೆಯೆಂದರೆ ದೇಶದ ಪ್ರಮುಖ ವ್ಯಕ್ತಿಗಳ ಚಿತ್ರಗಳನ್ನು ಗುರುತಿಸುವುದಿರಲಿ, ಅವರು ಯಾವ ಹುದ್ದೆಯಲ್ಲಿದ್ದಾರೆಂಬುದೂ ಅವರಿಗೆ ಗೊತ್ತಿಲ್ಲ. ದೇಶದ ಪ್ರಥಮ ರಾಷ್ಟ್ರಪತಿಯವರನ್ನು ಗುರುತಿಸುವುದರಲ್ಲಿಯೂ ಅಸಮರ್ಥರಾದುದನ್ನು ನೋಡಿ ತುಂಬಾ ದುಃಖವಾಯಿತು. ಇನ್ನಾದರೂ ಸರಿಯಾದ ಸ್ಪರ್ಧಿಗಳನ್ನು ಆಯ್ಕೆ ಮಾಡಿ ಕಾರ್ಯಕ್ರಮಕ್ಕೆ ಕಳುಹಿಸುವ ಕೆಲಸವನ್ನು ಶಾಲೆಗಳು ಮಾಡಬೇಕಾಗಿದೆ.

–ಎನ್. ಕೃಷ್ಣಮೂರ್ತಿ, ಬೆಂಗಳೂರು

## ಸಭ್ಯತೆ ಮೀರುತ್ತಿರುವ 'ಮಜಾ ಭಾರತ'

ಕಲರ್ಸ್ ಸೂಪರ್‌ನ ಪ್ರಮುಖ ಕಾರ್ಯಕ್ರಮ 'ಮಜಾ ಭಾರತ' ಉತ್ತಮವಾಗಿ ಬರುತ್ತಿತ್ತು. ಹಲವು ಉದಯೋನ್ಮುಖ ಕಲಾವಿದರನ್ನು ಕನ್ನಡಿಗರಿಗೆ ಪರಿಚಯಿಸಿದ ಕೀರ್ತಿ ಕೂಡ ಈ ಕಾರ್ಯಕ್ರಮಕ್ಕಿದೆ. ಆದರೆ ಇತ್ತೀಚಿನ ಕೆಲ ಕಂತುಗಳಲ್ಲಿ ಸಭ್ಯತೆಯ ಎಲ್ಲೆ ಮೀರುತ್ತಿದೆ. ಪಾತ್ರಧಾರಿಗಳ ಅಶ್ಲೀಲ ಸಂಭಾಷಣೆ ವಾಕರಿಗೆ ತರಿಸುತ್ತಿದೆ. ಅಶ್ಲೀಲ ಸಂಭಾಷಣೆ ನಡೆದಾಗ ಅತಿಥಿಗಳ ಕಡೆ, ತೀರ್ಪುಗಾರರ ಕಡೆ ಕ್ಯಾಮೆರಾ ಫೋಕಸ್ ಮಾಡುವುದು ತೀರ್ಪುಗಾರರಿಗೂ, ನೋಡುಗರಿಗೂ ಮುಜುಗರವನ್ನುಂಟು ಮಾಡುತ್ತಿದೆ.

–ಬಿಲ್ಲೇಶ್ವರ ಅಚ್ಚು, ಹುಂಚ

## ಜೋಕುಗಳಲ್ಲಿ ವೈದ್ಯರ ಟೀಕೆ

'ಹಿಂದೆ ಕಾಲದಲ್ಲಿ ಒಬ್ಬನೇ ಡಾಕ್ಟರ್ ಬಹುತೇಕ ಎಲ್ಲಾ ರೋಗಗಳಿಗೆ ಚಿಕಿತ್ಸೆ ಕೊಡುತ್ತಿದ್ದರು. ಈಗ ಒಂದೊಂದು ಅಂಗಕ್ಕೆ ಒಬ್ಬೊಬ್ಬ ಡಾಕ್ಟರ್. ಹೆಬ್ಬೆರಳಿಗೆ ಚಿಕಿತ್ಸೆ ಕೊಡುವವರು ಕಿರು ಬೆರಳನ್ನು ನೋಡುವುದಿಲ್ಲ, ಬಲಗಣ್ಣನ್ನು ನೋಡುವವನು ಎಡಗಣ್ಣನ್ನು ನೋಡುವುದಿಲ್ಲ. ತಲೆ ನೋವಿಗೆ ಮಾತ್ರೆ ಕೊಡುವವರು ಜ್ವರಕ್ಕೆ ಚಿಕಿತ್ಸೆ ಕೊಡುವುದಿಲ್ಲ...' ಎಂದು ಹೇಳುವ ಗಂಗಾವತಿ ಪ್ರಾಣೇಶ್ ತಮ್ಮ ಹಾಸ್ಯ ಪ್ರಹಸನದಲ್ಲಿ ವೈದ್ಯ ವೃತ್ತಿಯಲ್ಲಿರುವ ಸ್ಪೇಷಲೈಸೇಷನ್ ಬಗೆಗೆ ವ್ಯಂಗ್ಯವಾಡಿ ಕಿವಿಗಡಚಿಕ್ಕುವ ಚಪ್ಪಾಳೆ ಗಿಟ್ಟಿಸುತ್ತಾರೆ.

ಹಿಂದೆ ಹತ್ತಾರು ರೋಗಗಳಷ್ಟೇ ಪತ್ತೆಯಾಗಿದ್ದವು. ವೈದ್ಯ ವಿಜ್ಞಾನವೂ ಇಷ್ಟು ಬೆಳೆದಿರಲಿಲ್ಲ. ಒಬ್ಬನೇ ವೈದ್ಯ ಎಲ್ಲಾ ರೋಗಗಳಿಗೆ ಚಿಕಿತ್ಸೆ ಕೊಡುತ್ತಿದ್ದರು. ಆದರೆ, ಇಂದು ಅತಿ ಆಧುನಿಕತೆಯ ಪ್ರಭಾವವೋ ಏನೋ, ಪ್ರತಿ ದಿನವೂ ಹೊಸ ಹೊಸ ರೀತಿಯ ರೋಗಗಳು ಕಾಣುತ್ತಿದ್ದು, ಡಾಕ್ಟರ್‌ಗಳಿಗೆ ಸವಾಲಾಗುತ್ತಿವೆ. ಇದರಿಂದ ಸ್ಪೇಷಲೈಸೇಷನ್ ಅನಿವಾರ್ಯವಾಗಿದೆ. ಡಾಕ್ಟರ್ ನೆನಪಿಟ್ಟುಕೊಳ್ಳದಷ್ಟು ರೋಗಗಳಿವೆ. ಟೀಕೆ, ತಮಾಷೆ... ಎಲ್ಲವೂ ಸರಿ. ಅದು ವಾಸ್ತವದ ಅಡಿಯಲ್ಲಿ ಇರಲಿ ಮತ್ತು ಟೀಕೆ ಮಾಡುವ ಮೊದಲು ಸ್ವಲ್ಪ ಹೋಂವರ್ಕ್ ಇರಲಿ. ಇನ್ನೊಬ್ಬರನ್ನು ಮತ್ತು ಇನ್ನೊಬ್ಬರ ವೃತ್ತಿಯನ್ನು ನೋಯಿಸದಂತಿರಲಿ.

—ಡಾ.ಅನಿಕೇತ್ ಶರ್ಮಾ, ಬೆಂಗಳೂರು

## ಕಿಲಾಡಿಯಲ್ಲಿ ಹೊಡೆದಾಟವೇ ಹೆಚ್ಚು!

ಝೀ ಟಿವಿಯಲ್ಲಿ ಪ್ರಸಾರವಾಗುವ 'ಕಿಲಾಡಿ ಕುಟುಂಬ' ಆರೋಗ್ಯಕರವಾಗಿತ್ತು. ಆದರೆ ಇತ್ತೀಚೆಗೆ ಹೊಡೆದಾಟ– ಬಡಿದಾಟ ಜಾಸ್ತಿಯಾಯಿತು. ಅದರಲ್ಲೂ ಹಿರಿಯರು, ಕಿರಿಯರು, ತಂದೆ– ತಾಯಿ, ಮಾವ– ಅತ್ತೆ ಎಂದು ನೋಡದೆ ರಪ– ರಪ ಬಾರಿಸುವ ದೃಶ್ಯ ಜಾಸ್ತಿಯಾಯಿತು. ಪ್ರತಿದಿನವೂ ಜಗ್ಗೇಶ್ ಅವರ ಹೆಸರು ಹೇಳದೆ ಕಥೆ ಕೊನೆಗೊಳ್ಳುವುದಿಲ್ಲ. ಬಂದ ಅತಿಥಿಗಳೂ ಹೊಗಳುವವರೇ ವಿನಃ ಅದರಲ್ಲಿರುವ ಲೋಪ–ದೋಷಗಳನ್ನು ವಿವರಿಸುವುದಿಲ್ಲ.

–ಅಂಚೆಸುಬ್ರಮಣ್ಯ, ಕೊಪ್ಪ

## ಮನ ಸೆಳೆದ ಮಹಾದೇವ

ಸ್ಟಾರ್ ಸುವರ್ಣದ 'ಹರಹರ ಮಹಾದೇವ' ಕಣ್ಮನ ತುಂಬುತ್ತಿದೆ. ಮಾತಿನ ಶೈಲಿ, ಅಲಂಕಾರ, ಹಾವಭಾವ, ಪಾತ್ರಕ್ಕೆ ತಕ್ಕಂತಹ ವ್ಯಕ್ತಿತ್ವ ಅದ್ಭುತ. ಪಾರ್ವತಿ– ಶಿವ ಅವರ ಮಂದಹಾಸ, ಗಣೇಶ, ಕುಮಾರರ ತುಂಟತನ, ಚೆಲುವು, ಚಿಂತನೆ, ಸಾಕ್ಷಾತ್ ಕೈಲಾಸವನ್ನೆ ಕಂಡಂಥ ಸುಖಭಾವ.

ಬೇಸರದ ವಿಚಾರವೆಂದರೆ ಬಲಗೈಯಲ್ಲಿ ತ್ರಿಶೂಲ ಹಿಡಿದುನಿಂತ ಶಿವ ಎಡಗೈಯಿಂದ ಅಭಯ ತೋರುವುದು, ಪಾರ್ವತಿ ದೇವಿಗೆ ನಮಸ್ಕರಿಸಿದಾಗ ಸುಮ್ಮನಿರದೇ ಕೈಯೆತ್ತಿ ಹರಸುವುದಾಗಲಿ ಅಥವಾ ದೇವತೆಗಳಿಗೆ ಪ್ರತಿವಂದಿಸುವುದಾಗಲಿ ಮಾಡಬೇಕಲ್ಲವೇ? ಯಾಕೋ ಬಂಗಾರ ಹಿತ್ತಾಳೆಯಂತೆ ಭಾಸವಾಗುತ್ತಿದೆ.

ಜಾಹೀರಾತೇ ಹೆಚ್ಚಾಯಿತು. ಆರಂಭದಲ್ಲಿ ಹಿಂದಿನ ಸಂಚಿಕೆಯನ್ನು ಸಂಕ್ಷೇಪಿಸಿ ತೋರಿಸಿದರೆ, ಮುಂದಿನ ಭಾಗದಲ್ಲಿಯೂ ಮುನ್ನೋಟ. ಕೊನೆಭಾಗದಲ್ಲಿ ಮುಂದಿನ ಸಂಚಿಕೆ ತೋರಿಸುವುದು ರೇಜಿಗೆ ಹುಟ್ಟಿಸುತ್ತಿದೆ.

–ರತ್ನಾ ಅಶೋಕ ಗೊರವರ, ಧಾರವಾಡ